# ಬೆಂಗಳೂರು ಭಾಗದ ಮೊಹರಂ ಆಚರಣೆ

**ಸೈಯದ್ ಮುಯಿನ್**
ಕನ್ನಡ ಸಹಾಯಕ ಪ್ರಾಧ್ಯಾಪಕ
ಕ್ರಿಸ್ತು ಜಯಂತಿ ಕಾಲೇಜು, ಸ್ವಾಯತ್ತ,
ಕೆ.ನಾರಾಯಣಪುರ, ಕೊತ್ತನೂರು ಅಂಚೆ,
ಬೆಂಗಳೂರು–560077
syedmuen@kristujayanti.com

## ಮೊಹರಂ ತಿಂಗಳ ಮಹತ್ವ ಮತ್ತು ಪರಿಚಯ

ಮೊಹರಂ ಎನ್ನುವುದು ಇಸ್ಲಾಮಿನ ತಿಂಗಳು, ಇಸ್ಲಾಂ ಧರ್ಮದ ಪ್ರಕಾರ ವರ್ಷದ ಮೊದಲ ತಿಂಗಳು ಇದಾಗಿದೆ. ಮೊಹರಂ ತಿಂಗಳ ಮೊದಲ ದಿನವನ್ನು ಹೊಸ ವರ್ಷದ ಆಚರಣೆ ಮಾಡಲಾಗುತ್ತದೆ. ಹಾಗೆಯೇ ಶಿಯಾ ಪಂಗಡದವರು ಮೊಹರಂ ತಿಂಗಳ 10ನೇ ದಿನವನ್ನು ಶೋಕದ ದಿನವನ್ನಾಗಿ ಆಚರಿಸುತ್ತಾರೆ. ಹಜರತ್ ಅಲಿ ಮತ್ತು ಹಜರತ್ ಬೀಬಿ ಫಾತಿಮ ಅವರ ಮಕ್ಕಳು ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ಮೊಮ್ಮಕ್ಕಳಾದ ಹಜರತ್ ಹಸನ್ ಮತ್ತು ಹಜರತ್ ಹುಸೇನ್ ಅವರು ಸಾಮಾನ್ಯಯುಗ 680ರಲ್ಲಿ ಕುಫಾ ಪ್ರದೇಶದ ಹತ್ತಿರದ ಕರ್ಬಲ ಎಂಬ ಯುದ್ಧ ಭೂಮಿಯಲ್ಲಿ ಯಜೀದ್ ಎಂಬ ಕ್ರೂರಿ ಸರ್ವಾಧಿಕಾರಿಯ ವಿರುದ್ಧ ಹೋರಾಡಿ ಮೊಹರಂ ತಿಂಗಳ 10ನೇ ದಿನದಂದು ಮಡಿದು ಶಹೀದ್(ಹುತಾತ್ಮ) ಆದರು. ಕ್ರೂರಿ ಯಜೀದ್‌ನ ಸೈನ್ಯವು ಹಜರತ್ ಹುಸೇನ್ ಅವರ 6 ತಿಂಗಳ ಮಗನನ್ನು ಕೊಂದು, ಮಹಿಳೆಯರನ್ನು ಸೆರೆಯಾಳನ್ನಾಗಿಸಿದರು. ಅವರ ವೀರಹೋರಾಟವನ್ನು ನೆನೆಯುತ್ತ, ಅವರ ಮರಣದ ಶೋಕವನ್ನು ಮೊಹರಂ ತಿಂಗಳ 10ನೇ ದಿನದಂದು ಆಚರಿಸಲಾಗುತ್ತದೆ. ಹಜರತ್ ಹಸನ್ ಮತ್ತು ಹುಸೇನ್ ಅವರ ಮರಣದ ಶೋಕವು ಮೊಹರಂನ 1ನೇ ದಿನದಿಂದ 10ನೇ ದಿನದವರೆಗೆ ನಿರಂತರವಾಗಿ ಸಾಗುತ್ತದೆ. ಅನ್ಯಾಯದ ವಿರುದ್ಧ ಹೋರಾಡಿ ವೀರ ಮರಣ ಹೊಂದಿದ ನಾಯಕರುಗಳ ನೆನಪಿನ ದ್ಯೋತಕದ ಶೋಕಾಚರಣೆ ಇದಾಗಿದೆ. ಐತಿಹಾಸಿಕವಾಗಿ ಜರುಗಿದ ಘಟನೆಯನ್ನು ಇಂದಿಗೂ ಸ್ಮರಿಸುವುದು, ಯುದ್ಧದಲ್ಲಿ ಹುತಾತ್ಮರಾದ ವೀರರ ಶೌರ್ಯವನ್ನು ಹೊಗಳಿ ಕೊಂಡಾಡುವುದನ್ನು ಇಲ್ಲಿ ಕಾಣಬಹುದು.

ಮೊಹರಂ ತಿಂಗಳ ಹತ್ತನೇ ದಿನ ಮುಸ್ಲೀಮರ ಅಥವಾ ಇಸ್ಲಾಂ ಧರ್ಮದ ಹಬ್ಬವಲ್ಲ, ಇದೊಂದು ಆಚರಣೆ ಅಥವಾ ಶೋಕಾಚರಣೆಯಾಗಿದೆ. ಕಾಲಚಕ್ರದಲ್ಲಿ ಸಿಲುಕಿ ಈ ಶೋಕಾಚರಣೆಯು ಉತ್ಸವದ ರಂಗು ಪಡೆದಿದೆ. ಮೊಹರಂ ತಿಂಗಳಲ್ಲಿ ಯಾವುದೇ ರೀತಿಯ ಉತ್ಸವಗಳನ್ನ, ಶುಭ ಕಾರ್ಯಗಳನ್ನ, ಸಂತಸದ ಸಂಭ್ರಮಗಳನ್ನು ಆಚರಿಸಲಾಗುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಈ ನಂಬಿಕೆಯನ್ನು ಬಲವಾಗಿ ವಿರೋಧಿಸಲಾಗುತ್ತಿದೆ, ಎಲ್ಲಾ ತಿಂಗಳು, ದಿನಗಳು, ಸಮಯ ಅಲ್ಲಾಹನ ಸೃಷ್ಟಿ, ಶುಭ–ಅಶುಭವೆನ್ನುವುದು ಯಾವುದು ಇಲ್ಲ ಎಂಬ ಅರಿವು ಉಂಟಾಗಿ ಮೊಹರಂ ತಿಂಗಳಲ್ಲೇ ಮದುವೆಗಳನ್ನು ಮಾಡಲಾಗುತ್ತದೆ.

ಹಜರತ್ ಹಸನ್ ಮತ್ತು ಹುಸೇನ್ ವೀರ ಮರಣ ಹೊಂದಿದ್ದಕ್ಕಾಗಿ ಶಿಯಾ ಮುಸ್ಲೀಮರು ಶೋಕ ಆಚರಿಸಿದರೆ ಸುನ್ನಿ ಮುಸ್ಲೀಮರು ಮೊಹರಂ ತಿಂಗಳ 9 ಮತ್ತು 10ನೇ ದಿನದಂದು ಉಪವಾಸ ಇಡುತ್ತಾರೆ. ಸಾಮಾನ್ಯಯುಗ 622ರಲ್ಲಿ ಪ್ರವಾದಿ ಮುಹಮ್ಮದ್ ಅವರು ಈ ದಿನ ಉಪವಾಸ ಇಟ್ಟಿದ್ದರು ಎಂಬ ಕಾರಣಕ್ಕಾಗಿ ಸುನ್ನತ್ ಅನುಸರಿಸಲು ಉಪವಾಸವನ್ನು ಇಡುತ್ತಾರೆ. ಹಾಗೆಯೇ ಈ ದಿನವೇ ಇಸ್ರೇಲಿಯನ್ನರು/ಯಹೂದಿಗಳಿಗೆ ಫೆರೋನ ಶೋಷಣೆಯಿಂದ ಮುಕ್ತಿ ದೊರೆಯಿತೆಂಬ ನಂಬಿಕೆಯೂ ಇದೆ. ಮೊದಲ ಮಾನವ, ಮೊದಲ ಪ್ರವಾದಿ ಆದಮ್ ಅವರಿಗೆ ಪ್ರಾಯಶ್ಚಿತ್ತ ದೊರೆತ ದಿನ ಮೊಹರಂನ 10ನೇ ದಿನವಾಗಿದೆ, ಪ್ರವಾದಿ ನೂಹ್ ಅವರಿಗೆ ಮೊಹರಂನ 10ನೇ ದಿನದಂದೆ ಹಡಗಿನಲ್ಲಿ ರಕ್ಷಿಸಿದ್ದು ಎಂಬ ಇಸ್ಲಾಂ ಧರ್ಮದ ನಂಬಿಕೆಯಾಗಿದೆ. ಹಿಂದಿನ ವರ್ಷ ಮಾಡಿದ ಪಾಪ ಕಾರ್ಯಗಳಿಗೆ ಅಲ್ಲಾಹನಲ್ಲಿ ಕ್ಷಮೆ ಯಾಚಿಸುವ ದಿನ ಇದಾಗಿದೆ. ಹೊಸ ವರ್ಷವಾದ ಕಾರಣ ಮಸೀದಿಗಳಿಗೆ ಭೇಟಿ ನೀಡಿ ತಮ್ಮ ಕುಟುಂಬ ಮತ್ತು ಬಂಧುಬಳಗಕ್ಕಾಗಿ ಪ್ರಾರ್ಥಿಸಲು ಸೂಚಿಸಲಾಗಿದೆ.

ಮೇಲೆ ಸೂಚಿಸಿದ ಆಚರಣೆಗಳಲ್ಲಿ ಶಿಯಾ ಮತ್ತು ಸುನ್ನಿ ಪಂಗಡಗಳ ವಿವಿಧ ಆಚರಣೆಗಳನ್ನು ಪ್ರತ್ಯೇಕಿಸಿ ಹೇಳಲಾಗಿದೆ. ಮೂಲತಃ ಮೊಹರಂನ ಹತ್ತು ದಿನಗಳ ಕಾಲ ನಡೆಯುವ ಶೋಕಾಚರಣೆಯು ಶಿಯಾ ಮುಸ್ಲೀಮರು ಆಚರಿಸುತ್ತಾರೆ. ಪಂಜಗಳನ್ನು ಹೊರುವುದು, ಬೆಂಕಿ ಹಾಯುವುದು, ತಮ್ಮನ್ನು ರಕ್ತಸಿಕ್ತವಾಗುವಂತೆ ಶಿಕ್ಷಿಸುವುದು, ಹರಕೆ ಹೊರುವುದು ಈ ರೀತಿಯ ಆಚರಣೆ ಸುನ್ನಿ ಮುಸ್ಲೀಮರಲ್ಲಿ ನಿಷಿದ್ಧ, ಇದನ್ನು ಅತ್ಯಂತ ಘೋರ ಅಪರಾಧವೆಂದು ಭಾವಿಸಲಾಗುತ್ತದೆ. ಆದರೆ ಈ ಆಚರಣೆಗಳನ್ನು ಶಿಯಾ ಮುಸ್ಲೀಮರಂತೆ ಸುನ್ನಿ ಮುಸ್ಲೀಮರು ಆಚರಿಸುತ್ತಾರೆ. ಇದಕ್ಕೆ ಕಾರಣ ಭಾರತ ಮತ್ತು ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಸುಲ್ತಾನರು ಶಿಯಾ ಪಂಗಡದವರಾದ್ದರಿಂದ ಅವರ ಆಚರಣೆಗಳು ಸಾರ್ವಜನಿಕವಾಗುತ್ತ ಸುನ್ನಿ ಸಂಪ್ರದಾಯದವರು

ಇದನ್ನು ಪಾಲಿಸತೊಡಗಿದರು. 14ನೇ ಶತಮಾನದ ಸುಮಾರಿಗೆ ಕರ್ನಾಟಕ ಪ್ರವೇಶಿಸಿದ ಬಹಮನಿ ಮತ್ತು ಆದಿಲ್ ಶಾಹಿ ಸುಲ್ತಾನರು ಶಿಯಾ ಸಮುದಾಯದವರಾಗಿದ್ದರು ಇವರ ಆಚರಣೆಗಳ ಪ್ರಭಾವ ಇತರ ಸಮುದಾಯಗಳ ಮೇಲೂ ಆದವು, ಇದರಿಂದ ಸುನ್ನಿ ಸಮುದಾಯದವರು ಹೊರತಾಗಿರಲಿಲ್ಲ.

ಮೊಹರಂ ಶೋಕಾಚರಣೆಯು ಶಿಯಾ ಪಂಗಡದವರಿಗೆ ಮಾತ್ರ ಸೀಮಿತವಾದುದು ಎಂದು ನಿಖರವಾಗಿ ಹೇಳುವ ಪ್ರಯತ್ನವನ್ನು ಇಲ್ಲಿ ಮಾಡಿಲ್ಲ, ಕಾರಣ ಕರ್ಬಲ ಯುದ್ಧ ಭೂಮಿಯಲ್ಲಿ ಮಡಿದವರು ಪ್ರವಾದಿ ಮುಹಮ್ಮದ್ ಅವರ ಮೊಮ್ಮಕ್ಕಳು, ಅವರ ವೀರ ಮರಣಕ್ಕೆ ಎಲ್ಲಾ ಮುಸ್ಲೀಂ ಸಮುದಾಯ ಶೋಕ ವ್ಯಕ್ತಪಡಿಸುತ್ತದೆ. ಆದರೆ ಪಂಜಗಳನ್ನು ಪ್ರತಿಷ್ಠಾಪಿಸುವುದು, ಪಂಜಗಳನ್ನು ಹೊತ್ತು ಮೆರವಣಿಗೆ ಮಾಡುವುದು, ಅಲಾವಿ ತುಳಿಯುವುದು ಮೂಲ ಇಸ್ಲಾಮಿನ ನಂಬಿಕೆಗಳ ವಿರುದ್ಧವಾದುದು, ಇವೆಲ್ಲಾ ಕುಫ್ರ್ ಎಂದು ಮೂಲ ಸಂಪ್ರದಾಯವಾದಿಗಳು, ಇಸ್ಲಾಮಿನ ವಿವಿಧ ಶಾಖೆಗಳು ಸುನ್ನಿ ಸಮುದಾಯದವರಿಗೆ ಬಿತ್ತರಿಸುತ್ತಿದ್ದಾರೆ. ಇದು ಸರಿಯಾದರು ಸಹ ನೂರಾರು ವರ್ಷಗಳಿಂದ ತಲತಲಾಂತರಗಳಿಂದ ಆಚರಿಸಿಕೊಂಡು ಬಂದಿರುವ ಆಚರಣೆಗಳನ್ನು, ಸಂಪ್ರದಾಯಗಳನ್ನು ಇದ್ದಕ್ಕಿದ್ದ ಹಾಗೆ ಬಿಟ್ಟುಬಿಡಲು ಬಹುಜನರು ಒಪ್ಪದಿರುವುದನ್ನು ಕಾಣಬಹುದು. ಈ ಎಲ್ಲಾ ಕಾರಣ, ಪರಿಣಾಮಗಳೇನೇ ಇರಲಿ ನೂರಾರು ವರ್ಷಗಳಿಂದ ಬೆಂಗಳೂರಿನಲ್ಲಿ ಆಚರಣೆಯಲ್ಲಿರುವ ಮೊಹರಂ ಆಚರಣೆಯ ಬಗ್ಗೆ ಒಂದಿಷ್ಟು ಮಾಹಿತಿಯನ್ನು ನೀಡಲಾಗಿದೆ.

**ಬೆಂಗಳೂರು ಭಾಗದ ಮೊಹರಂ ಆಚರಣೆ**

ಹಜರತ್ ತವಕ್ಕಲ್ ಮಸ್ತಾನ್ ದರ್ಗಾವು ಬೆಂಗಳೂರಿನ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಕಾರ್ಯನಿರ್ವಹಿಸುತ್ತದೆ. ಹೈದರಾಲಿಯ ಅಧಿಕಾರಾವಧಿಯಲ್ಲಿ ಬೆಂಗಳೂರಿನಲ್ಲಿ ಕೋಟೆಯನ್ನು ಪುನರ್ನಿರ್ಮಾಣ ಮಾಡುವ ಸಂದರ್ಭದಲ್ಲಿ ಕಾರ್ಮಿಕರಾಗಿ ಬಂದಿದ್ದ ಮೂರು ಪ್ರಮುಖ ಸೂಫಿಗಳಲ್ಲಿ ಟಿಪ್ಪು ಮಸ್ತಾನ್, ಮಾಣಿಕ್ ಮಸ್ತಾನ್ ಮತ್ತು ತವಕ್ಕ್‌ಲ್ ಮಸ್ತಾನ್ ಆಗಿದ್ದರು. ಇವರ ಮಹಿಮೆಗೆ ಶರಣಾಗತನಾಗಿ ಹೈದರ್ ಅಲಿ ತನ್ನ ಮಗನಿಗೆ ಟಿಪ್ಪು ಸುಲ್ತಾನ್ ಎಂದು ನಾಮಕರಣ ಮಾಡಿದನೆಂದು ದಂತಕಥೆಗಳಿವೆ. ಇವರೆಲ್ಲ ಇಸ್ಲಾಮ್ ಧರ್ಮದ ಪ್ರಚಾರಕರಷ್ಟೇ ಅಲ್ಲ, ಬಹುಸಂಸ್ಕೃತಿ, ಭ್ರಾತೃತ್ವ, ಸೌಹಾರ್ದತೆಯನ್ನು ಪ್ರತಿಪಾದಿಸಿದ ಸಂತರು ಆಗಿದ್ದಾರೆ. ಇವತ್ತಿಗೂ ಇವರುಗಳ ಗೋರಿಗಳ ಬಳಿ ಧರ್ಮಾತೀತವಾದ ಆಚರಣೆಗಳನ್ನು ಕಾಣಬಹುದು. ಸರ್ವಜನಾಂಗದವರು ತಮ್ಮ ಆಸೆ, ಅಭಿಲಾಷೆ, ಅಭೀಪ್ಸೆಗಳ ಪೂರೈಕೆಗಾಗಿ ಇಲ್ಲಿ ಬರುವುದನ್ನು ಕಾಣಬಹುದು.

ಕಾಟನ್‌ಪೇಟೆಯಲ್ಲಿರುವ ಬೆಂಗಳೂರಿನ ಅತ್ಯಂತ ಪ್ರಾಚೀನ ಮತ್ತು ದೊಡ್ಡ ದರ್ಗಾ ಇದಾಗಿದೆ. ಹೈದರ್ ಅಲಿಯ ಅವಧಿಯಲ್ಲಿ ಪ್ರಾರಂಭಗೊಂಡ ನಿರ್ಮಾಣ ಕಾರ್ಯ ಟಿಪ್ಪು ಸುಲ್ತಾನ್‌ನ ಅವಧಿಯಲ್ಲಿ ಅಂದರೆ ಸಾಮಾನ್ಯಯುಗ 1783ರಲ್ಲಿ ಪೂರ್ಣಗೊಂಡಿತು. ಮೊಹರಂ, ಕರಗ, ರಂಜಾನ್, ಉರುಸ್ ಹೀಗೆ ಧರ್ಮ ಸಾಮರಸ್ಯದ ಕೊಂಡಿಯಾಗಿ ಇಂದಿಗೂ ಧಾರ್ಮಿಕ ಸಾಮರಸ್ಯದ ಸಂಕೇತವಾಗಿ ಹಜರತ್ ತವಕ್ಕಲ್ ಮಸ್ತಾನ್ ದರ್ಗಾ ಆಗಿದೆ. ಧಾರ್ಮಿಕ ಸಾಮರಸ್ಯಕ್ಕಾಗಿ ಪಣತೊಟ್ಟು ನಿಂತ ಸೂಫಿ ಸಂತರ 20–30 ದರ್ಗಾಗಳನ್ನು ಬೆಂಗಳೂರಿನ ಸುತ್ತಮುತ್ತ ಪ್ರದೇಶಗಳಲ್ಲಿ ಗುರುತಿಸಬಹುದಾಗಿದೆ. ಬೆಂಗಳೂರಿನ ಕರಗದ ಸಂದರ್ಭದಲ್ಲಿ ತವಕ್ಕಲ್ ಮಸ್ತಾನ್ ದರ್ಗಾದ ಪ್ರದಕ್ಷಿಣೆ ಕಡ್ಡಾಯವಾದಂತೆ, ಮೊಹರಂ ಸಂದರ್ಭದಲ್ಲಿನ ಪಂಜಾಗಳನ್ನು ಹೊತ್ತ ವ್ಯಕ್ತಿಗಳು ಧರ್ಮರಾಯಸ್ವಾಮಿ ದೇವಾಲಯದ ಮೂಲಕ ಹಾದುಹೋಗುವುದು ಕಡ್ಡಾಯವಾಗಿದೆ. ತವಕ್ಕಲ್ ಮಸ್ತಾನ್ ದರ್ಗಾದಿಂದ ಹೊರಟ ಪಂಜಾಗಳು ಹಳೇ ಬೆಂಗಳೂರು ಭಾಗದ ನಾಲ್ಕು ಮೂಲೆಗಳನ್ನು ಸುತ್ತುತ್ತಾ ರಾತ್ರಿ ಹೊತ್ತು ನಡೆಯುವ ಈ ಆಚರಣೆಗಳು ಬಹುತೇಕ ಜನರಿಗೆ ಅಗೋಚರವಾಗಿಯೇ ಉಳಿದಿದೆ. ಈ ರೀತಿಯ ಆಚರಣೆಗಳ ಹಿಂದೆ ಹಲವು ದಂತಕಥೆಗಳು ಇವೆ ಅದರಲ್ಲಿ ಒಂದು ಕರಗ ಹೊತ್ತ ವ್ಯಕ್ತಿಯು ಕಾಕತಾಳಿಯವೆಂಬಂತೆ ಸಂತ ತವಕ್ಕಲ್ ಮಸ್ತಾನ್ ಅವರ ದರ್ಗಾದ ಮುಂದೆ ಬಂದು ನಿಲ್ಲುವುದು, ಇವರ ಆಶೀರ್ವಾದ ಪಡೆದ ನಂತರವೇ ಕರಗದ ಮರೆವಣಿಗೆ ಮುಂದೆ ಸಾಗುವುದು, ಮತ್ತೊಂದು ದಂತಕಥೆ ಪ್ರಕಾರ ಕರಗ ಹೊತ್ತ ಕಲಶವು ಬೀಳುವುದು ಅಶುಭಕರ ಹೀಗೆ 'ಸಂತ ತವಕ್ಕಲ್ ಮಸ್ತಾನ್' ಅವರ ಕಾಲದಲ್ಲಿ ಕರಗ ಹೊತ್ತ ವ್ಯಕ್ತಿಯು ಕರಗದ ಕಲಶವು ತಲೆಯಿಂದ ಬೀಳದಂತಾಗಲಿ ಎಂದು ಹರಸಿ ಎಂದು ಸಂತ ತವಕ್ಕಲ್ ಮಸ್ತಾನ್ ಅವರಲ್ಲಿ ಕೇಳಿಕೊಂಡನು, ಆ ಹರಕೆಯು ನೆರವೇರಿತು ಎಂದು ನಂಬಲಾಗಿದೆ. ಹೀಗೆ ದರ್ಗಾಗೆ ಕರಗದ ಪ್ರವೇಶದ ಸಂಪ್ರದಾಯವು ಇಂದಿಗೂ ಮುಂದುವರೆದಿದೆ. ಕರಗದ ಪೂಜೆಯು ಕರಗ ಹೊರುವ ಮೂರು ದಿವನ ಮುಂಚಿತವಾಗಿ ದರ್ಗಾಗೆ ಬರುತ್ತದೆ ಮತ್ತು ಕರಗ ಹೊರುವ ದಿನ ಕರಗವು ಮೊದಲಿಗೆ 'ತವಕ್ಕಲ್ ಮಸ್ತಾನ್' ದರ್ಗಾವನ್ನು ಪ್ರವೇಶಿಸಿ ಧೂಪದೀಪದಾರತಿ ಪಡೆದು ಮೂರು ಸುತ್ತು ಪ್ರದಕ್ಷಿಣೆ ಮಾಡಿ ನಂತರ ನಗರದ ಪ್ರದಕ್ಷಿಣೆಗೆ ಹೋಗುತ್ತದೆ.

**ಹಸ್ತದ ಚಿಹ್ನೆಗಳು**

ಅರಬಿ ಭಾಷೆಯಲ್ಲಿ ಖಂಝ ಅಥವಾ ಹಂಝ ಎಂದು ಕರೆಯಲ್ಪಡುವ ಹಸ್ತದ ಚಿಹ್ನೆಯು ಪ್ರವಾದಿ ಮುಹಮ್ಮದ್ ಅವರ ಮಗಳಾದ ಹಜರತ್ ಫಾತಿಮಾ ಅವರ ಹಸ್ತದ ಕುರುಹೆಂದು, ಕ್ರೈಸ್ತ ಮತ್ತು ಜ್ಯೂಯಿಷ್

ಧರ್ಮದ ನಂಬಿಕೆಗಳ ಪ್ರಕಾರ ಮೇರಿ/ಮರಿಯಮ್, ಮಾತೃ ದೇವತೆಯ ಆಶೀರ್ವಾದದ ಚಿಹ್ನೆಯ ದ್ಯೋತಕವೆಂದು ನಂಬಲಾಗುತ್ತದೆ. ಕುದೃಷ್ಟಿಯಿಂದ ಪರಿಹಾರಕ್ಕಾಗಿ ಹಸ್ತದ ಚಿಹ್ನೆಯನ್ನು ಪ್ರಾಚೀನ ಕಾಲದಿಂದಲೂ ಬಳಸುತ್ತಿರುವುದಾಗಿ ನಂಬಿಕೆಯಿದೆ. ಈ ಚಿಹ್ನೆಯ ಬಳಕೆಯ ಪುರಾವೆಯು ಮೆಸಪಟೋಮಿಯ ನಾಗರೀಕತೆಯಲ್ಲೂ ಕಂಡುಬರುತ್ತದೆ.

ಭಾರತದಲ್ಲಿ ಪಂಜ/ಪಂಜತನ್ ಎಂದು ಹೆಸರಿಸಲ್ಪಡುವ ಹಂಝುವನ್ನು ಕೈಹಸ್ತವೆಂಬ ಅರ್ಥದಲ್ಲಿ ಬಳಕೆ ಮಾಡಲಾಗುತ್ತದೆ. ಪಂಜ ಎಂದರೆ ಐದು ಬೆರಳುಗಳು/ಹಸ್ತ ಎಂಬ ಅರ್ಥವಿದೆ. ಹಸ್ತದ ಚಿಹ್ನೆಯನ್ನು ಮನೆಯ ಮುಂದೆ ಶಾಮಿಯಾನವನ್ನು ಹಾಕಿ ಮೊಹರಂನ 7ನೇ ದಿನದಂದು ಪ್ರತಿಷ್ಠಾಪಿಸಲಾಗುತ್ತದೆ. ಈ ಹಸ್ತದ ಚಿಹ್ನೆಗಳ ಸಂಖ್ಯೆಯು ಒಂದರಿಂದ ಐದು ಆರಿನವರೆಗೆ ಇರುತ್ತದೆ. ಇದನ್ನು ವಿವಿಧ ಲೋಹಗಳ ಮಿಶ್ರಣದಿಂದ ತಯಾರಿಸಲಾಗಿರುತ್ತದೆ. ಮೊಹರಂ ಶೋಕಾಚರಣೆಯ ಸಂದರ್ಭದಲ್ಲಿ ಹಸ್ತದ ಚಿಹ್ನೆಗಳನ್ನು ಹೊತ್ತು ಸಾಗುವುದು ಬಹು ಪ್ರಸಿದ್ಧ ಮತ್ತು ಪ್ರಾಚೀನ ಸಂಪ್ರದಾಯವಾಗಿದೆ. ಇರಾನ್, ಇರಾಕ್, ಪಾಕಿಸ್ತಾನ, ಭಾರತ, ಬಾಂಗ್ಲಾದೇಶಗಳಲ್ಲಿ ಈ ಆಚರಣೆಯು ಪ್ರಸಿದ್ಧಿಯನ್ನು ಪಡೆದಿದೆ. ಅರಬ್ ದೇಶದಲ್ಲಿ ಈ ರೀತಿಯ ಆಚರಣೆಗಳಿಗೆ ನಿಷೇಧವಿದೆ. ಅರಬ್ ದೇಶದಲ್ಲೇ ಜರುಗಿದ ಘಟನೆಯನ್ನು ಅರಬಿಗರು ವಿರೋಧಿಸುತ್ತಾರೆ, ಮುಸ್ಲೀಮರಿರುವ ಇನ್ನಿತರ ದೇಶಗಳಲ್ಲಿ ಈ ಆಚರಣೆಯು ಸಾಮಾನ್ಯವಾಗಿದೆ. ಆದರೆ ಇತ್ತೀಚಿನ ಕಾಲದಲ್ಲಿ ಹಲವಾರು ಉಲಮಾಗಳು, ವಿದ್ವಾಂಸರು ಈ ಆಚರಣೆಯ ವಿರೋಧ ವ್ಯಕ್ತಪಡಿಸಿವುದರಿಂದ ಮೊಹರಂ ಆಚರಣೆ ತನ್ನ ಪ್ರಾಧಾನ್ಯತೆ ಕಳೆದುಕೊಳ್ಳುತ್ತಿದೆ.

**ಅಲಾವ/ಅಲಾವಿ**

ಬೆಂಕಿಯ ಕೊಂಡವನ್ನು ಹಾಯುವುದು ಮೊಹರಂ ಆಚರಣೆಯ ಪ್ರಮುಖ ಭಾಗವಾಗಿದೆ. ಇದನ್ನು ಅಲಾವಿ ಅಥವಾ ಅಲಾವ ಎಂದು ಕರೆಯಲಾಗುತ್ತದೆ. ಪಂಜಗಳನ್ನು ಪ್ರತಿಷ್ಠಾಪಿಸುವವರೆಲ್ಲ ಪಂಜಗಳ ಮುಂದೆ 10–12 ಅಡಿ ಅಗಲದ ಬೆಂಕಿಯ ಕೊಂಡವನ್ನು ಸಿದ್ಧಪಡಿಸಿ ಸ್ಥಳೀಯರು ತಮ್ಮ ಹರಕೆಗಳು ತೀರಲೆಂದು, ಹರಕೆ ಪೂರ್ಣಗೊಂಡಿದರ ಪರವಾಗಿ ಕಟ್ಟಿಗೆ, ಕರಿಮೆಣಸು, ಉಪ್ಪುಗಳನ್ನು ಬೆಂಕಿಯ ಕೊಂಡಕ್ಕೆ ಅರ್ಪಿಸುತ್ತಾರೆ. ಹಜರತ್ ತವಕ್ಕಲ್ ಮಸ್ತಾನ್ ದರ್ಗಾದಲ್ಲಿ ಸುಮಾರು 30–40 ಅಡಿ ಎತ್ತರದ ಅಲಾವಿಯನ್ನು ತಯಾರಿಸಲಾಗುತ್ತದೆ. ಇಲ್ಲಿ ಬೆಂಕಿಯ ಕೊಂಡವನ್ನು ಹಾಯುವುದಿಲ್ಲ ಬದಲಾಗಿ ಹರಕೆ ಹೊತ್ತವರು, ಹರಕೆ ಪೂರ್ಣಗೊಂಡವರು, ಮದುವೆಯಾಗದ ಹುಡುಗಿಯರಿಗೆ ಬೆಂಕಿಯ ಸ್ನಾನ(ಒಂದು ಕೊಡ ನೀರು ಹೊಯ್ದು

ಕೆಂಡವನ್ನು ಮೈಮೇಲೆ ಸುರಿಯಲಾಗುತ್ತದೆ)ವನ್ನು ಮಾಡಿಸಲಾಗುತ್ತದೆ. ಮೊಹರಂ ತಿಂಗಳ 7, 8 ಮತ್ತು 9ನೇ ದಿನದಲ್ಲಿ ಅಲಾವಿ ಕೆಂಡವನ್ನು ಆವೇಶ ಭರಿತರಾಗಿ ತುಳಿಯುವುದು, ಪಂಜಗಳನ್ನು ಹೊತ್ತು ಮೆರವಣಿಗೆ ಮಾಡುವುದು ನಡೆಯುತ್ತದೆ. ಅಲಾವಿ ಬೆಂಕಿಯನ್ನು ತುಳಿಯುವ ಪದ್ಧತಿಯು ಕರ್ಬಲ ಯುದ್ಧದ ಸಂದರ್ಭದಲ್ಲಿ ಹಜರತ್ ಹುಸೇನ್ ಅವರ ಬಿಡಾರಗಳನ್ನು ಯಜೀದ್‌ನ ಸೈನಿಕರು ಸುಟ್ಟು ಸಂಭ್ರಮಿಸಿದರು, ಇದರ ಶೋಕಾಚರಣೆಯ ಸಂದರ್ಭಕ್ಕೆ ಅಲಾವಿಯನ್ನು ರಚಿಸಿ ದುಖವನ್ನು ವ್ಯಕ್ತಪಡಿಸಲಾಗುತ್ತದೆ.

**ವಿಶೇಷ ಅಡುಗೆಗಳು**

ಮೊಹರಂ ಆಚರಣೆಯ ನಿರತ ಸುನ್ನಿ ಸಂಪ್ರದಾಯಸ್ಥರು ತಮ್ಮ ಮನೆಗಳಲ್ಲಿ ಶರಬತ್ತು(ಹಾಲು, ಕಸ್ತೂರಿ ಬೀಜ, ಬಾದಾಮಿ, ಗೋಡಂಬಿ, ಒಣಕರ್ಜೂರ ಮಿಶ್ರಿತ ಪೇಯ), ಚೋಂಗೆ(ಸಿಹಿ ರೊಟ್ಟಿ), ಬುತ್ತಿ(ಮೊಸರನ್ನ ಪ್ರಕಾರದ ವಿಶೇಷ ಅಡುಗೆ), ಖಿಚ್ಡಾ(ವಿವಿಧ ತರಕಾರಿ, ಕಾಳು, ಕೀಮಾ(ಮಾಂಸದ ಅತಿ ಸಣ್ಣ ತುಂಡುಗಳು), ಅಕ್ಕಿ ಮಿಶ್ರಿತ ಗಟ್ಟಿಗಂಜಿ)ವನ್ನು ತಯಾರಿಸಿ ಸಾರ್ವತ್ರಿಕವಾಗಿ ವಿತರಿಸಲಾಗುತ್ತದೆ. ಈ ವಿತರಣೆಯು ಹತ್ತು ದಿನಗಳ ಕಾಲ ನಿರಂತರವಾಗಿ ಸಾಗುತ್ತದೆ.

ಯಾ ಹಸನ್, ಯಾ ಹುಸೇನ್ ಎಂದು ಘೋಷಣೆಗಳನ್ನು ಮಾಡುತ್ತ, ಪಂಜಗಳನ್ನು ಹೊತ್ತು ಹಜರತ್ ತವಕ್ಕಲ್ ಮಸ್ತಾನ್ ದರ್ಗಾದತ್ತ ಬರಲಾಗುತ್ತದೆ. ದರ್ಗಾದ ಹತ್ತಿರವಿರುವ ಓಕಳೀಪುರ, ರಾಮಚಂದ್ರಾಪುರ, ಮಲ್ಲೇಶ್ವರ, ಮಾಗಡಿರಸ್ತೆ, ಪಾದರಾಯನಪುರ, ಜಗಜೀವನರಾಮನಗರ, ಆಜಾದ್‌ನಗರ, ಹಳೇ ಬೆಂಗಳೂರಿನ ಪೇಟೆ ವಲಯದ ಪ್ರದೇಶಗಳಿಂದ ಪಂಜಗಳನ್ನು ಹೊತ್ತು ನಡಿಗೆಯಲ್ಲೇ ದರ್ಗಾಗೆ ಬರಲಾಗುತ್ತದೆ. ದೂರದ ಪ್ರದೇಶದ ಪಂಜಗಳನ್ನು ವಾಹನಗಳ ಮೂಲಕ ಹೊತ್ತು ತರಲಾಗುತ್ತದೆ. ಹೀಗೆ ದರ್ಗಾಗೆ ಬಂದವರಿಗೆಲ್ಲ ಶರಬತ್ತು, ಖಿಚ್ಡಾವನ್ನು ವಿತರಿಸಲಾಗುತ್ತದೆ.

**ಮೊಹರಂನ ಹತ್ತನೇ ದಿನ**

ಮೊಹರಂ ತಿಂಗಳ ಮೊದಲ ಹತ್ತು ದಿನಗಳ ಕಾಲ ಜಾತ್ರೆಯ ಹಾಗೆ ಸಂಭ್ರಮಗೊಳ್ಳುವ ಕಾಟನ್‌ಪೇಟೆ, ಉಪ್ಪಾರಪೇಟೆ, ಕಬ್ಬನ್‌ಪೇಟೆ, ಕುಂಬಾರಪೇಟೆ, ರಾಜ ಮಾರುಕಟ್ಟೆ, ಅಕ್ಕಿಪೇಟೆಯು ಗಿಜಿಗುಡುತ್ತಿರುತ್ತದೆ. ಬೆಂಗಳೂರಿನ ವಿವಿಧ ಮೂಲೆಗಳಿಂದ ಪಂಜಗಳನ್ನು ಹೊತ್ತು ತರುವವರು ಕಾಟನ್‌ಪೇಟೆಯ ತವಕ್ಕಲ್ ಮಸ್ತಾನ್ ದರ್ಗಾದಲ್ಲಿ ಗುಂಪು ಸೇರುತ್ತಾರೆ. ಗಂಡಸರು, ಹೆಂಗಸರು, ಹುಡುಗ–ಹುಡುಗಿಯರು, ಮಕ್ಕಳು,

ವಯಸ್ಸಾದವರೆಲ್ಲ ಇಲ್ಲಿ ನೆರೆದು ಸಂಭ್ರಮಗೊಳ್ಳುತ್ತಾರೆ. ತರಹೇವಾರಿ ಅಂಗಡಿ ಮುಂಗಟ್ಟುಗಳು, ಊಟ ತಿಂಡಿಯ ಬಂಡಿಗಳು, ಮಕ್ಕಳ ಆಟಿಕೆಗಳು, ಹಿರಿಯರಿಗೆ ಬೇಕಾದ ವಸ್ತುಗಳು, ಮನರಂಜನಾ ಆಟಿಕೆಗಳು ಇಲ್ಲಿ ಲಭ್ಯವಿರುತ್ತದೆ. ಮೊಹರಂನ ಹತ್ತು ದಿನಗಳು ಹಜರತ್ ತವಕ್ಕಲ್ ಮಸ್ತಾನ್ ದರ್ಗಾದ ಸುತ್ತಮುತ್ತಲಿನ ಪ್ರದೇಶವು ಆಕರ್ಷಣೀಯ ಕೇಂದ್ರವಾಗಿರುತ್ತದೆ. ನಂತರ ಮೊಹರಂನ ಹತ್ತನೇ ದಿನ ಧರ್ಮಾಂಬುಧಿ ಕೆರೆ(ಮೆಜೆಸ್ಟಿಕ್ ಬಸ್‌ನಿಲ್ದಾಣದ ಶಾಂತಲ ಸಿಲ್ಕ್ ಹೌಸ್‌ನ ಮುಂಭಾಗದ ಮೈದಾನ)ಯ ದಡದಲ್ಲಿ ಕುಳಿತು ಪಂಜಗಳನ್ನು ತೊಳೆದು ಮತ್ತೆ ಪೆಟ್ಟಿಗೆಯಲ್ಲಿ ಭದ್ರವಾಗಿ ಇಡುತ್ತಾರೆ. ಮುಂದಿನ ವರ್ಷ ಮತ್ತೆ ಈ ಪಂಜಗಳನ್ನು ಹೊತ್ತು ಮೊಹರಂ ಆಚರಣೆ ಮಾಡಲಾಗುತ್ತದೆ.

ಉತ್ತರ ಕರ್ನಾಟಕದ ಮೊಹರಂ ಆಚರಣೆಗಳಲ್ಲಿ ಹಾಡುವ ಮೊಹರಂ ಪದಗಳು, ಅಲಾವಿ ಪದಗಳು ಕನ್ನಡದಲ್ಲೇ ಹಾಡಲಾಗುತ್ತದೆ, ಆದರೆ ಬೆಂಗಳೂರು ಭಾಗದಲ್ಲಿ ನಡೆಯುವ ಮೊಹರಂ ಆಚರಣೆ ಸಂದರ್ಭದಲ್ಲಿ ಹಾಡುವ ಖಸೀದ, ಹಮ್ದ್ ಮತ್ತು ನಾತ್‌ಗಳು ಉರ್ದು ಭಾಷೆಯಲ್ಲೇ ಇರುತ್ತವೆ. ಇದನ್ನು ರಾತ್ರಿ ಹೊತ್ತು ಮತ್ತು ಬೆಳಗಿನ ನಮಾಜ್‌ನ ನಂತರ ಈ ಪ್ರಾರ್ಥನಾ ಗೀತಗಳನ್ನು ಪಂಜಗಳ ಎದುರು ಅಥವಾ ಮಸೀದಿಯಲ್ಲಿ ಹಾಡಲಾಗುತ್ತದೆ. ಉತ್ತರ ಕರ್ನಾಟಕದ ಮೊಹರಂ ಪದಗಳು, ಅಲಾವಿ ಪದಗಳಲ್ಲಿ ಹಿಂದೂ–ಮುಸ್ಲಿಂ ಬಾಂಧವ್ಯದ ಮಧುರ ಮತ್ತು ಸೌಹಾರ್ದಯುತ ಭಾವವನ್ನು ಕಾಣಬಹುದು. ಬೆಂಗಳೂರಿನಲ್ಲಿ ಹಾಡುವ ಪದಗಳಲ್ಲಿ ಅಲ್ಲಾಹ, ಪ್ರವಾದಿ ಮುಹಮ್ಮದ್ ಅವರ ಗುಣಗಾನ, ಪ್ರಾರ್ಥನೆಯಿರುತ್ತದೆ. ಹಜರತ್ ಹಸನ್–ಹುಸೇನ್ ಅವರ ವೀರಗಾಥೆಯನ್ನು ಹಾಡಲಾಗುತ್ತದೆ. ಮೆರವಣಿಗೆ ಹೊರಟ ಪಂಜಗಳ ಮುಂದೆ ವೇಷಗಾರಿಕೆ ಹಾಕಿ ಕುಣಿಯುವುದನ್ನು ಇಲ್ಲಿ ಕಾಣದಿದ್ದರು ಢೋಲ್ ಬಾರಿಸುವವರು, ಡೊಳ್ಳು ಬಾರಿಸುವುದನ್ನು ಸಾಮಾನ್ಯವಾಗಿ ಕಂಡುಬರುತ್ತದೆ.

ಈ ಆಚರಣೆಗಳು ಸುಮಾರು ನೂರಾರು ವರ್ಷಗಳಿಂದ ಸರ್ವೇಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲಿ ಆಚರಣೆಯಲ್ಲಿದ್ದವು, ಆದರೆ ಕಾಲ ಬದಲಾದಂತೆ ವಿವಿಧ ಶಾಖೆಗಳ ಮುಸ್ಲಿಂ ನಂಬಿಕೆಗಳ ಶಿಕ್ಷಣ ಪದ್ಧತಿಯು ಸಾರ್ವತ್ರಿಕವಾದಂತೆ ಸುನ್ನಿ ಮತ್ತು ಶಿಯಾ ಆಚರಣೆಗಳ ನಡುವಿನ ಭೇದವನ್ನರಿತು ಮೊಹರಂ ಆಚರಣೆಯ ಪ್ರಮಾಣ ನಗರ ಪ್ರದೇಶಗಳಲ್ಲಿ ಆದಷ್ಟು ಕಡಿಮೆಯಾಗುತ್ತ ಬಂದಿದೆ. ಹಾಗೆಯೇ ಗ್ರಾಮಗಳಲ್ಲೂ ಇಂತಹ ಆಚರಣೆಗಳು ಕ್ರಮೇಣ ಕಣ್ಮರೆಯಾಗುತ್ತಿವೆ. ಕುರ್‌ಆನ್, ಹದೀಸ್‌ಗಳ ಶಿಕ್ಷಣ ಪಡೆದ ಆಧುನಿಕ ಯುವ ಜನಾಂಗವು ಇಂತಹ ಆಚರಣೆಗಳಿಗೆ ತಮ್ಮ ಒಲವನ್ನು ಕ್ಷೀಣಿಸುತ್ತಿವೆ. ಧಾರ್ಮಿಕ ಚೌಕಟ್ಟಿನಲ್ಲಿ ಇಂತಹ

DOI: 10.59176
http://www.kristujayantijournal.com/index.php/KJKSP

ಆಚರಣೆಗಳು ನಿಷಿದ್ಧವೇ ಆದರು ಒಂದು ಪ್ರದೇಶದ ಸಾಂಸ್ಕೃತಿಕ ಆಚರಣೆಗಳ ವಿನಾಶವಂತು ಆಗುತ್ತಿರುವುದು ಶೋಚನೀಯವಾಗಿದೆ. ಮೊಹರಂ ಆಚರಣೆ ಮತ್ತಿತ್ತರ ಆಚರಣೆಗಳ ಕ್ಷೀಣಿಸುವಿಕೆಗೆ ಕೇವಲ ಇಸ್ಲಾಮಿನ ಶಿಕ್ಷಣವಷ್ಟೇ ಅಲ್ಲ, ಆಧುನೀಕರಣ, ವ್ಯಸ್ತ ಜೀವನಶೈಲಿ, ಧಾರ್ಮಿಕ ಆಚಾರ ವಿಚಾರಗಳ ಅನುಸರಣೆಯಲ್ಲಿನ ಉದಾಸೀನಭಾವವೂ ಆಗಿದೆ ಎಂದರೆ ತಪ್ಪಾಗಲಾರದು. ಇದೊಂದೇ ಆಚರಣೆ ಕಣ್ಮರೆಯಾಗುತ್ತಿಲ್ಲ ಸುಮಾರು 20 ವರ್ಷಗಳ ಹಿಂದೆ ಮುಸ್ಲೀಂ ಕುಟುಂಬಗಳಲ್ಲಿ ಸಾಮಾನ್ಯವಾಗಿದ್ದ ದಸ್ ಬೀಬಿಕೀ ಕಹಾನಿ(ಹತ್ತು ಮುತ್ತೈದೆಯರ ಕಥೆ), ಬಾರ್ವಿ(12ನೇ ದಿನ), ಅಲ್ಲಾಹ್ ನಾಮ್‌ಕೀ ಬಾಸನ್(ಅಲ್ಲಾಹನ ಹೆಸರಿನ ನೈವೇದ್ಯ), ಚಿರಾಕ್ ಕೀ ಫಾತೆಹಾ(ದೀಪದಾರಾಧನೆ) ಇತ್ಯಾದಿ ಆಚರಣೆಗಳು, ಸಂಪ್ರದಾಯಗಳು ಮರೆಯಾಗುತ್ತಿವೆ. ಧಾರ್ಮಿಕ ದೃಷ್ಟಿಕೋನದಿಂದ, ಕಟ್ಟಾ ಸಂಪ್ರದಾಯವಾದಿಗಳ ದೃಷ್ಟಿಯಿಂದ ಈ ನಡೆಯು ಉತ್ತಮವಾದುದು, ಆದರೆ ಸಾಂಸ್ಕೃತಿಕ ಭಿನ್ನತೆ, ಆಚರಣೆಗಳ ವಿನಾಶವು ಗಹನ ವಿಚಾರದೆಡೆಗೆ ಕೊಂಡೊಯ್ಯುತ್ತದೆ. ಇಸ್ಲಾಂ ಧರ್ಮದ ಮೂಲ ಆಶಯಕ್ಕೆ ವಿರುದ್ಧವಾದುದರಿಂದ ಈ ಆಚರಣೆಗಳು ವಿನಾಶವಾದರು, ಇವುಗಳ ಆಚರಣ ವಿಧಿ ವಿಧಾನಗಳು, ರೀತಿ ನೀತಿಗಳನ್ನು ಸಂಗ್ರಹಿಸಿಡುವುದು ಅತ್ಯಾವಶ್ಯಕವಾಗಿದೆ.

ಶಿಯಾ ಮತ್ತು ಸುನ್ನಿ ಸಂಪ್ರದಾಯ, ಆಚರಣೆಗಳು ರೂಪಾಂತರ ಮತ್ತು ವೈರುಧ್ಯಗಳನ್ನೆಲ್ಲಾ ಹೇಗೆ ಅರ್ಥಮಾಡಿಕೊಳ್ಳುವುದು? ಇತಿಹಾಸದ ಮೇಲೆ ವರ್ತಮಾನ ಮಾಡುವ ಸವಾರಿಯೆಂದೇ? ಪುರಾಣವಾಗಲೀ, ಐತಿಹಾಸಿಕ ಘಟನೆಯಾಗಲೀ ದೇಶಾಂತರಗೊಂಡಾಗ, ಕಾಲಾಂತರದಲ್ಲಿ ಹೊಸ ಸಮಾಜದ ಗರ್ಭದಲ್ಲಿ ಅದು ಹಾದು ಹೊಸ ಹುಟ್ಟನ್ನು ಪಡೆಯುತ್ತದೆ. ಲಾರ್ವಾದಿಂದ ಚಿಟ್ಟೆಯಾದಂತೆ ಸಾಂಸ್ಕೃತಿಕ ಮರುಹುಟ್ಟು ಪಡೆಯುತ್ತವೆ. ಹೀಗೆಯೇ ಶಿಯಾ ಸಂಪ್ರದಾಯಗಳನ್ನು ಸುನ್ನಿ ಸಂಪ್ರದಾಯದವರು ತಮ್ಮ ಧಾರ್ಮಿಕ ಆಚರಣೆಗಳೆಂದೇ ಆಚರಿಸುತ್ತಿರುವುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು**

1. ಜಾನಪದ ಹಬ್ಬಗಳು ಮತ್ತು ಉತ್ಸವಗಳು: ಹನುಮಂತರಾವ್.ಬಿ.ದೊಡ್ಡಮನಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಕನ್ನಡ ಜಾನಪದ ನಿಘಂಟು: ಪದ ಸಂಸ್ಕೃತಿ ಕೋಶ: ಪ್ರ.ಸಂ.ಡಿ.ಬಿ.ನಾಯಕ ಸಂ.ಪ್ರೊ. ರಾಮೇಗೌಡ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, 2017
3. ಮೊಹರಂ ಪದಗಳು: ದಸ್ತಗೀರ್ ಅಲ್ಲೀಭಾಯಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1999

4. ದಕ್ಷಿಣ ಭಾರತೀಯ ಜಾನಪದ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010
5. ಜನಪದ ದರ್ಶನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,1998
6. ಜಾನಪದ ತಿಳುವಳಿಕೆ, ಚಕ್ಕೆರೆ ಶಿವಶಂಕರ್, ಸಾಗರ್ ಪ್ರಕಾಶನ, ಬೆಂಗಳೂರು,2001
7. ಜಾನಪದ ಲೇಖನಗಳು, ಡಾ.ಮಲ್ಲಿಕಾರ್ಜುನ ಕುಂಬಾರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು



ಹಜರತ್ ತವಕ್ಕಲ್ ಮಸ್ತಾನ್ ದರ್ಗಾದ ಏಕ್ ಕಲ್ಲಿಕೀಸವಾರಿ(ಒಂದು ಮೊಗ್ಗಿನ ಸವಾರಿ)



ಬೆಂಗಳೂರಿನ ಕಾಡುಗೊಂಡನಹಳ್ಳಿಯಲ್ಲಿ ಮೊಹರಂ ಆಚರಣೆ



ಅಲಾವಿಯನ್ನು ಹಾಯುತ್ತಿರುವ ದೃಶ್ಯ